Client : Bangalore Nano 2008 | Lead : Bangalore Nano

Publication : Times of India Kannada | Date : 14, Dec, 2008

Section : Pg-2 | Method : Conference


ಟೈಮ್ಸ್ ಸಿಟಿ

ಸಂಡೇ ಟೈಮ್ಸ್ ಆಫ್ ಇಂಡಿಯಾ, ಬೆಂಗಳೂರು, ಭಾನುವಾರ, ಡಿಸೆಂಬರ್ 14, 2008


Page-2

# ಭಾರತದ ನ್ಯಾನೊ ನಗರ ಬೆಂಗಳೂರು

**ಬೆಂಗಳೂರು:** 'ಭಾರತದ ನ್ಯಾನೊ ನಗರ ಬೆಂಗಳೂರು'- ಇದು ಕರ್ನಾಟಕ ಸರ್ಕಾರ ಮತ್ತು ನ್ಯಾನೊ ವಿಷನ್ ಗ್ರೂಪ್ ಹೊರಡಿಸಿದ ಘೋಷಣೆ.

ಶನಿವಾರ ಸಮಾರೋಪಗೊಂಡ ಎರಡನೇ ಬೆಂಗಳೂರು ನ್ಯಾನೊ ಸಮಾವೇಶದಲ್ಲಿ ರಾಜ್ಯಪಾಲ ರಾಮೇಶ್ವರ ಠಾಕೂರ್ ಈ ಘೋಷಣೆ ಬಿಡುಗಡೆ ಮಾಡಿದರು.

ನ್ಯಾನೊ ವಿಜ್ಞಾನ ಮತ್ತು ನ್ಯಾನೊ ತಂತ್ರಜ್ಞಾನದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಅಗತ್ಯವಾದ ಉತ್ತೇಜನ ನೀಡಲು ಸರ್ಕಾರ ಬದ್ಧವಾಗಿದೆ. ನ್ಯಾನೊ ವಿಜ್ಞಾನದ ವಾಣಿಜ್ಯೀಕರಣಕ್ಕೆ ಅವಕಾಶ ಕಲಿಸಲು ಮತ್ತು ಈ ಕ್ಷೇತ್ರದಲ್ಲಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಕ್ಕೆ ಪ್ರೋತ್ಸಾಹ ನೀಡಲಾಗುವುದು.

ನ್ಯಾನೊ ಕ್ಷೇತ್ರದಲ್ಲಿ ಯುವ ಸಂಶೋಧಕರಿಗೆ, ಉದಯೋನ್ಮುಖ ಉದ್ಯಮಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶ ನೀಡಲು ಸರ್ಕಾರ ಬದ್ಧವಾಗಿದೆ. ಈ ಕಾರಣಕ್ಕಾಗಿ ಸರ್ಕಾರ ವಿಜ್ಞಾನಿಗಳು ಮತ್ತು ಉದ್ಯಮಿಗಳ ನಡುವೆ ಸಮನ್ವಯತೆಯಿಂದ ಕಾರ್ಯನಿರ್ವಹಿಸಲಿದೆ ಎಂದು ಘೋಷಣೆ ಹೇಳಿದೆ.

**ನ್ಯಾನೊ ಪಾರ್ಕ್:** ನ್ಯಾನೊ ತಂತ್ರಜ್ಞಾನ ಕ್ಷೇತ್ರದಲ್ಲಿ ಈಗಾಗಲೇ ಕರ್ನಾಟಕ ಮುಂಚೂಣಿಯಲ್ಲಿದ್ದು, ನಗರದ ಹೊರಭಾಗದ 14 ಎಕರೆ ಜಾಗದಲ್ಲಿ ನ್ಯಾನೊ ಪಾರ್ಕ್ ನಿರ್ಮಿಸಲಾಗುವುದು ಎಂದು ನ್ಯಾನೊ ವಿಷನ್ ಗ್ರೂಪ್ ಅಧ್ಯಕ್ಷ ಡಾ. ಸಿ.ಎನ್.ಆರ್. ರಾವ್ ತಿಳಿಸಿದರು. ಐಟಿ ಬಿಟಿ ನಂತರ ರಾಜ್ಯದಲ್ಲಿ ನ್ಯಾನೊವನ್ನು ಬಲವಾಗಿ ಬೇರೂರಿಸಲು ಸರ್ಕಾರ ಬದ್ಧವಾಗಿದ್ದು, ಈ ದಿಶೆಯಲ್ಲಿ ರಾಜ್ಯ ಸರ್ಕಾರ ನ್ಯಾನೊ ತಂತ್ರಜ್ಞಾನ ಕ್ಷೇತ್ರಕ್ಕೆ 1000 ಕೋಟಿ ರೂ. ಮೀಸಲಿರಿಸಿದೆ ಎಂದು ಗೃಹ ಸಚಿವ ಡಾ. ವಿ.ಎಸ್. ಆಚಾರ್ಯ ತಿಳಿಸಿದರು. 3 ದಿನಗಳಿಂದ ನಡೆಯುತ್ತಿರುವ ಈ ಸಮಾವೇಶ ಶನಿವಾರ ಕೊನೆಗೊಂಡಿದ್ದು, ವಿವಿಧ ಕ್ಷೇತ್ರಗಳಲ್ಲಿ ನ್ಯಾನೊ ಬಳಕೆ ಬಗ್ಗೆ ವಿಚಾರ ಸಂಕಿರಣಗಳು ನಡೆದವು.

**ಉಪ ರಾಷ್ಟ್ರಪತಿ ಮನವಿ:** ನ್ಯಾನೊ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಸಮುದಾಯದ ಅನುಕೂಲಕ್ಕೆ ಬಳಸುವ ಸವಾಲನ್ನು ಸ್ವೀಕರಿಸಬೇಕಿದೆ ಎಂದು ಉಪ ರಾಷ್ಟ್ರಪತಿ ಎಂ. ಹಮೀದ್ ಅನ್ಸಾರಿ ವಿಜ್ಞಾನಿ ಸಮುದಾಯಕ್ಕೆ ಕಿವಿಮಾತು ಹೇಳಿದರು. 'ದೇಶದ ಬಹುಪಾಲು ಜನ ಕೃಷಿಯನ್ನು ನಂಬಿಕೊಂಡಿರುವು

ದರಿಂದ ಹೆ

ಯಕ್ಕೆ ವಿಸ್ತರಿ

ಕುಡಿಯುವ



**ಘೋಷಣೆ:** ನ್ಯಾನೊ ವಿಷನ್ ಗ್ರೂಪ್ ಅಧ್ಯಕ್ಷ ಡಾ. ಸಿ.ಎನ್ ರಾಮೇಶ್ವರ ಠಾಕೂರ್ ಹಾಗೂ ಭಾರತದ ಉಪರಾಷ್ಟ್ರಪತಿ ಶನಿವಾರ 'ಭಾರತದ ನ್ಯಾನೊ ನಗರ ಬೆಂಗಳೂರು ಘೋಷ